**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಶ್ರೀ ಸಿ.ಎನ್.ಮಂಜೇಗೌಡ, ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಹಾಗೂ ಶ್ರೀ ಕೇಶವ ಪ್ರಸಾದ್.ಎಸ್ ಇವರುಗಳು ನಿಯಮ-330ರ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ.**

**ಪ್ರಶ್ನೆ:**

**ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಗೇರುಮರಡಿ ಗ್ರಾಮದಲ್ಲಿ ಮೇಲ್ವರ್ಗದವರ ಬಡಾವಣೆಯೊಳಗೆ ದಲಿತ ಯುವಕ ಬಂದಿದ್ದಾನೆಂದು ಆರೋಪಿಸಿ ಹಲ್ಲೆ ಮಾಡಿರುವುದಲ್ಲದೇ, ಆತನಿಗೆ ದಂಡವಿಧಿಸುವ ಮೂಲಕ ಅಸ್ಪೃಶ್ಯತೆ ಆಚರಿಸಿರುವ ಘಟನೆ ನಡೆದಿರುತ್ತದೆ. ಕೆಳಜಾತಿಯವರು ನಮ್ಮ ಬಡಾವಣೆಗೆ ಬಂದಿದ್ದರಿಂದ ಬಡಾವಣೆ ಮೈಲಿಗೆ ಆಗಿದೆ ಎಂದು ದಂಡ ಕಟ್ಟಿಸಿಕೊಂಡಿರುತ್ತಾರೆ. ರಾಜ್ಯದಲ್ಲಿ ಇಂತಹ ಅನೇಕ ಘಟನೆಗಳು ಪದೇ ಪದೇ ಮರುಕಳಿಸುತ್ತಿರುತ್ತವೆ. ಅಸ್ಪೃಶ್ಯತೆಯು ಸಾಮಾಜಿಕ ಪಿಡುಗಾಗಿದ್ದು, ಅಸ್ಪೃಶ್ಯತೆಯ ನಿವಾರಣೆಗೆ ಸಮಾಜದಲ್ಲಿ ಇರುವ ಪ್ರತಿಯೊಬ್ಬರು ಕೈಜೋಡಿಸಬೇಕು. ಅಸ್ಪೃಶ್ಯತೆ ಮಾಡುವವರಿಗೆ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಪ್ರಜಾಪ್ರಭುತ್ವ ದೇಶದಲ್ಲಿ ಅಸ್ಪೃಶ್ಯತೆ ನಿವಾರಣೆಗಾಗಿ ಅನೇಕ ಕಾರ್ಯಕ್ರಮಗಳು ರೂಪಿಸಿದರೂ ಕೂಡ ಇಂದಿಗೂ ಸಮಾಜದಲ್ಲಿ ಅಸ್ಪೃಶ್ಯತೆಯಂತಹ ಅನಿಷ್ಟ ಪದ್ಧತಿ ಜೀವಂತವಾಗಿದೆ. ಅಸ್ಪೃಶ್ಯತೆ ಆಚರಿಸುವವರಲ್ಲಿ ಜಾಗೃತಿ ಮೂಡಿಸುವ ಹಾಗೂ ಅಂತಹವರ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವ ಕುರಿತು.**

**ಉತ್ತರ:**

ಮಾರುತಿ ಬಿನ್ ಗೋವಿಂದಪ್ಪ, ಎಂ.ಸಿ.ಹಳ್ಳಿ ಅಂಬೇಡ್ಕರ ನಗರ, ತರೀಕೆರೆ ರವರು ದಿನಾಂಕ 01.01.2024 ರಂದು ತರೀಕೆರೆ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ದೂರಿನಲ್ಲಿ ಸದರಿಯವರು ಗೇರಮರಡಿ ಗ್ರಾಮದಲ್ಲಿ ರವಿ ಎಂಬುವವರಿಗೆ ಸಂಬಂಧಿಸಿದ ಕೆಲಸಕ್ಕೆಂದು ಬೆಳಿಗ್ಗೆ 11-00 ಗಂಟೆಯಿಂದ ಬೆಳಿಗ್ಗೆ 11-30 ಗಂಟೆಯ ಸಮಯದಲ್ಲಿ ಜೆಸಿಬಿಯಲ್ಲಿ ಕೆಲಸ ಮಾಡುತ್ತಿರುವಾಗ ಗೇರಮರಡಿ ಗ್ರಾಮದ ಸುಮಾರು 30-40 ಜನರು ಬಂದು ನೀನು ಮಾದಿಗ ಸಮುದಾಯದವನು ನೀವು ನಮ್ಮ ಬೀದಿಗೆ ಬರುವಂತಿಲ್ಲ ಏಕೆ ನಮ್ಮ ಬೀದಿಗೆ ಬಂದಿದ್ದೀಯ ಎಂದು ಜೆಸಿಬಿಯನ್ನು ಆಪರೇಟ್ ಮಾಡುತ್ತಿದ್ದ ತನ್ನ ಬಟ್ಟೆಯನ್ನು ಹಿಡಿದು ಧರಧರನೆ ಎಳೆದು, ಮನಬಂದಂತೆ ಥಳಿಸಿ ದೊಣ್ಣೆಯಿಂದ ಕುಡುಗೋಲಿನಿಂದ ಹೊಡೆದು ನೀನು ನಮ್ಮ ಊರಿಗೆ ಮೈಲಿಗೆ ಮಾಡಿದ್ದೀಯ ನೀನು 01 ಲಕ್ಷ ದಂಡವನ್ನು ಕಟ್ಟಬೇಕೆಂದು ಹೇಳಿ, ನಿನ್ನ ಬಟ್ಟೆ ಬಿಚ್ಚಿ ಮೆರವಣಿಗೆ ಮಾಡುತ್ತೇವೆ ಎಂದು ಬೈದು ಅವಾಚ್ಯ ಶಬ್ದಗಳಿಂದ ನಿಂಧಿಸಿ ಊರಿನಿಂದ ಹೊರಗೆ ಎಳೆದುಕೊಂಡು ಹೋಗಿ ಬಿಟ್ಟಿರುತ್ತಾರೆ ಎಂದು ದೂರನ್ನು ದಾಖಲಿಸಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ, ತರೀಕೆರೆ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 01/2024 ಕಲಂ 143, 147, 148, 323, 324, 327, 504. ರೆ/ವಿ 149 ಐಪಿಸಿ ಮತ್ತು ಕಲಂ 3(1)(ಆರ್) (ಎಸ್), 3(2)(ವಿ)(ಎ) ಎಸ್.ಸಿ./ಎಸ್.ಟಿ. ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಾಸಿಕೊಳ್ಳಲಾಗಿದೆ.

ಸದರಿ ಘಟನೆ ನಡೆದ ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರು ಭೇಟಿ ನೀಡಿ ಸ್ಥಳ ಪರಿಶೀಲನೆಯನ್ನು ಕೈಗೊಂಡು, ಘಟನೆಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿಯನ್ನು ಪಡೆದು, ತನಿಖೆಗೆ ಸಂಬಂಧಿಸಿದಂತೆ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ನೀಡಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಯನ್ನು ಪೊಲೀಸ್ ಉಪಾಧಿಕ್ಷಕರು, ತರೀಕೆರೆ ಉಪವಿಭಾಗ ತರೀಕೆರೆ ರವರು ಕೈಗೊಂಡಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ 05 ಜನ ಆರೋಪಿತರನ್ನು ದಸ್ತಗಿರಿ ಮಾಡಿ, ಕಾನೂನು ಕ್ರಮ ಕೈಗೊಂಡಿದ್ದು, ಪ್ರಕರಣದ ಇನ್ನುಳಿದ 09 ಆರೋಪಿತರುಗಳು ಘನ ನ್ಯಾಯಾಲಯದಿಂದ ನಿರೀಕ್ಷಣಾ ಜಾಮಿನು ಪಡೆದಿದ್ದು ಅವರುಗಳನ್ನು ಘನ ನ್ಯಾಯಾಲಯದ

ಆದೇಶದಂತೆ ದಸ್ತಗಿರಿ ಕ್ರಮ ಜರುಗಿಸಲಾಗಿರುತ್ತದೆ. ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದು, ಆರೋಪಿಗಳ ವಿರುದ್ಧ 107 ಸಿ.ಆರ್.ಪಿ.ಸಿ. ರೀತ್ಯಾ ಸಂಬಂಧಪಟ್ಟ ತಾಲ್ಲೂಕು ದಂಡಾಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆ.

ಗೇರುಮರಡಿಯಲ್ಲಿ ನಡೆದ ಅಸ್ಪೃಶ್ಯತೆಯ ಆಚರಣೆ ವಿಚಾರಕ್ಕೆ ಸಂಬಂಧಿಸಿದಂತೆ, ದಿನಾಂಕ:03.01.2024 ರಂದು ಗೊಲ್ಲರಹಟ್ಟಿಯ ಮುಂಖಂಡರುಗಳನ್ನು ತರೀಕೆರೆ ಪೊಲೀಸ್ ಠಾಣೆಗೆ ಕರೆಯಿಸಿ ಗ್ರಾಮದಲ್ಲಿ ಎಲ್ಲಾ ಸಮುದಾಯದವರಿಗೂ ಕೂಡ ಮುಕ್ತ ಪ್ರವೇಶವನ್ನು ಕಲ್ಪಿಸಬೇಕು ಹಾಗೂ ಇನ್ನೂ ಮುಂದೆ ಗ್ರಾಮದಲ್ಲಿ ಯಾವುದೇ ರೀತಿಯ ಅಸ್ಪೃಶ್ಯತೆಯ ಆಚರಣೆಯನ್ನು ಕೈಗೊಳ್ಳಬಾರದೆಂದು ತಿಳುವಳಿಕೆ ಹಾಗೂ ಎಚ್ಚರಿಕೆಯನ್ನು ನೀಡಲಾಗಿರುತ್ತದೆ.

ಪೊಲೀಸ್ ಅಧೀಕ್ಷಕರು, ಪೊಲೀಸ್ ಉಪಾಧೀಕ್ಷಕರು, ಉಪವಿಭಾಗಧೀಕಾರಿಗಳು, ತಾಲ್ಲೂಕು ದಂಡಾಧಿಕಾರಿಗಳು ತರೀಕೆರೆ ರವರು ದಿನಾಂಕ: 05.01.2024 ರಂದು ಗೇರಮರಡಿ ಗ್ರಾಮದ ಗೊಲ್ಲರಹಟ್ಟಿಗೆ ಭೇಟಿ ನೀಡಿ ಸಭೆಯನ್ನು ನಡೆಸಿದ್ದು, ಗ್ರಾಮದಲ್ಲಿನ ಮುಖಂಡರುಗಳು ತರೀಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವ ಕಾರಣ ದಸ್ತಗಿರಿ ಮಾಡುವ ಭಯದಿಂದ ಊರನ್ನು ತೊರೆದಿದ್ದು ಊರಿನಲ್ಲಿದ್ದ ನಿವಾಸಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ನಿವಾಸಿಗಳು ಸಭೆಗೆ ಬಂದಿದ್ದು, ಸದರಿ ಸಭೆಯಲ್ಲಿ ನಿವಾಸಿಗಳಿಗೆ ಆಧುನಿಕತೆಯ ಬಗ್ಗೆ ಹಾಗೂ ಗ್ರಾಮದಲ್ಲಿ ಅಸ್ಪೃಶ್ಯತೆಯ ಆಚರಣೆಯ ವಿಚಾರಕ್ಕೆ ಸಂಬಂಧಿಸಿದಂತೆ ಸೂಕ್ತ ತಿಳುವಳಿಕೆಯನ್ನು ನೀಡಿರುತ್ತಾರೆ.

ದಿನಾಂಕ: 07.01.2024 ರಂದು ತಾಲ್ಲೂಕು ದಂಡಾಧಿಕಾರಿಗಳ ಕಛೇರಿ ತರೀಕೆರೆಯಲ್ಲಿ ಗೊಲ್ಲರಹಟ್ಟಿ ಜನಾಂಗದ ಮುಖಂಡರುಗಳು ಹಾಗೂ ದಲಿತ ಮುಖಂಡರುಗಳನ್ನು ಕರೆದು ಸೌಹಾರ್ದ ಸಭೆಯನ್ನು ಏರ್ಪಡಿಸಿದ್ದು, ಸದರಿ ಸಭೆಯಲ್ಲಿ ತರೀಕೆರೆ ಉಪವಿಭಾಗಾಧಿಕಾರಿಗಳು ಹಾಗೂ ತಾಲ್ಲುಕೂ ದಂಡಾಧಿಕಾರಿಗಳು ಹಾಗೂ ಮಾನ್ಯ ಶಾಸಕರು, ತರೀಕೆರೆ ವಿಧಾನಸಭಾ ಕ್ಷೇತ್ರ ರವರು ಭಾಗವಹಿಸಿದ್ದು, ಸಭೆಯಲ್ಲಿ ಎರಡು ಸಮುದಾಯಗಳ ಮುಖಂಡರುಗಳು ಮಾತನಾಡಿ ಗೊಲ್ಲರಹಟ್ಟಿಯಲ್ಲಿ ದಿನಾಂಕ: 01.01.2024 ರಂದು ನಡೆದ ಘಟನೆಯು ಖಂಡನೀಯವಾಗಿದ್ದು, ಇನ್ನೂ ಮುಂದೆ ಈ ರೀತಿಯ ಘಟನೆಗಳು ಆಗಬಾರದಾಗಿ ಸಭೆಯಲ್ಲಿ ತಿಳಿಸಿದ್ದು, ಇದಕ್ಕೆ ಎರಡೂ ಕೋಮಿನ ಮುಖಂಡರುಗಳು ಸಹಮತಿಯನ್ನು ಸೂಚಿಸಿದ್ದಾಗಿದ್ದು, ಸದರಿ ಸಭೆಯಲ್ಲಿ ಗೊಲ್ಲರಹಟ್ಟಿ ಗ್ರಾಮಕ್ಕೆ ತೆರಳಿ ಗ್ರಾಮದ ಬೀದಿಗಳಲ್ಲಿ ಮೆರವಣಿಗೆಯನ್ನು ಮಾಡಿ ದೇವಸ್ಥಾನ ಪ್ರವೇಶಕ್ಕೆ ಸರ್ಕಾರದ ವತಿಯಿಂದಲೇ ಅನುವು ಮಾಡಿಕೊಡಬೇಕಾಗಿದ್ದು, ಈ ಬಗ್ಗೆ ಸೂಕ್ತ ದಿನಾಂಕವನ್ನು ನಿಗಧಿ ಮಾಡಬೇಕೆಂದು ತಿಳಿಸಿರುತ್ತಾರೆ.

ನಂತರ ಇದೇ ದಿನ ಗೊಲ್ಲ ಜನಾಂಗದ ಮುಖಂಡರುಗಳು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಯಾದ ಶ್ರೀ ಯೋಗೀಶ್ ಹಾಗೂ ತಾಲ್ಲೂಕು ದಂಡಾಧಿಕಾರಿಗಳು ಹಾಗೂ ತರೀಕೆರೆ ಉಪ ವಿಭಾಗಧಿಕಾರಿಗಳು ಗೊಲ್ಲರಹಟ್ಟಿಗೆ ಬೇಟಿ ನೀಡಿ ಅಲ್ಲಿನ ನಿವಾಸಿಗಳನ್ನು ಭೇಟಿ ಮಾಡಿ ಗ್ರಾಮದಲ್ಲಿ ಇರುವಂತಹ ಅಸ್ಪೃಷ್ಯತೆಯನ್ನು ಹೋಗಲಾಡಿಸುವ ವಿಚಾರ, ಸಮಾಜದಲ್ಲಿ ಎಲ್ಲರೊಂದಿಗೆ ಬೆರೆತು ಸಾಗುವಂತೆ ತಿಳಿಸಿರುತ್ತಾರೆ.

ದಿನಾಂಕ:09.01.2024 ರಂದು ತರೀಕೆರೆ ತಹಸೀಲ್ದಾರ್ ಹಾಗೂ ಉಪವಿಭಾಗಾಧಿಕಾರಿ ರವರ ನೇತೃತ್ವದಲ್ಲಿ ಸುಮಾರು 40 ಜನ ದಲಿತ ಮುಖಂಡರು ಗೊಲ್ಲರಹಟ್ಟಿಗೆ ಭೇಟಿ ನೀಡಿ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನಕ್ಕೆ ಪ್ರವೇಶ ಮಾಡಿರುತ್ತಾರೆ. ಅಸ್ಪೃಶ್ಯತೆ ಆಚರಣೆಯಂತಹ ಘಟನೆಗಳು ನಡೆಯದಂತೆ ತರೀಕೆರೆ ಉಪವಿಭಾಗ ವ್ಯಾಪ್ತಿಯ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿರುವ 17 ಗೊಲ್ಲರಹಟ್ಟಿಗಳಿಗೆ ಆಯಾ

ಠಾಣಾಧಿಕಾರಿಗಳು ಖುದ್ದು ಭೇಟಿ ನೀಡಿ, ಅಸ್ಪೃಶ್ಯತೆ ಆಚರಣೆ ಮಾಡದಂತೆ ಸೂಕ್ತ ತಿಳುವಳಿಕೆಯನ್ನು ನೀಡಿದ್ದು, ಅಸ್ಪೃಶ್ಯತೆ ಆಚರಣೆ ಮಾಡುವವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುತ್ತಿರುವುದಾಗಿ ಅರಿವು ಮೂಡಿಸಲಾಗಿರುತ್ತದೆ.

ಹೆಚ್‌ಡಿ 14 ಎಸ್‌ಡಿಎನ್ 2024

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು